**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ**
ಸಾಃ ಸುರಪುರ

**ಸಿ ಸಿ ನಂ. 594/2024**

ಪಿರ್ಯಾದಿ : ಸುರಪುರ ಪೋಲಿಸ್ ಠಾಣೆ

ವಿರುದ್ಧ

ಆರೋಪಿತರು : ಮರಲಿಂಗಪ್ಪ ಮತ್ತು ಇತರರು

**ದಂಡ ಪ್ರಕಿಯಾ ಸಂಹಿತೆ ಕಲಂ 240 (1) ರಡಿಯಲ್ಲಿ ದೋಷಾರೋಪಣೆ**

ನಾನು ಬಸವರಾಜ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ಸುರಪುರ ಈ ಮೂಲಕ ನಿಮ್ಮ ಮೇಲೆ ರಚಿಸುವ ದೋಷಾರೋಪಣೆ ಏನೆಂದರೆ,

01. ಮರಲಿಂಗಪ್ಪ @ ಮರೆಪ್ಪ ತಂದೆ ಹಣಮಂತ ಬಿರೆದಾರ
ವಯಸ್ಸುಃ 48 ವರ್ಷ, ಉಃ ಒಕ್ಕಲುತನ

02. ನಿಂಗಯ್ಯ ತಂದೆ ಹಣಮಂತ ಬಿರೆದಾರ
ವಯಸ್ಸು : 38 ವರ್ಷ, ಉಃ ಒಕ್ಕಲುತನ

03. ರಾಮಣ್ಣ ತಂದೆ ಹಣಮಂತ ಬಿರೆದಾರ
ವಯಸ್ಸು : 35 ವರ್ಷ, ಉಃ ಒಕ್ಕಲುತನ

04. ಮರೆಮ್ಮ ಗಂಡ ನಿಂಗಪ್ಪ @ ನಿಂಗಯ್ಯ
ವಯಸ್ಸುಃ 29 ವರ್ಷ ಉಃ ಮನೆಕೆಲಸ

05. ಚಂದವ್ವ ಗಂಡ ಹಣಮಂತ ಬಿರೆದಾರ
ವಯಸ್ಸುಃ 73 ವರ್ಷ ಉಃ ಮನೆಕೆಲಸ
ಎಲ್ಲರೂ ಸಾಃ ಅಡ್ಡೊಡಗಿ

ಮೊದಲನೆದಾಗಿ ದಿನಾಂಕ 22.01.2024 ರಂದು ರಾತ್ರಿ 07.30 ಗಂಟೆ ಸುಮಾರಿಗೆ ಸುರಪುರ ಪೋಲಿಸ ಠಾಣಾ ಹದ್ದಿಯ ಪೈಕಿ ಅಡ್ಡೊಡಗಿ ಗ್ರಾಮದಲ್ಲಿ ಚಾಸಾ1 ರವರು ತಮ್ಮ ಮನೆಯ ಹಿಂದುಗಡೆ ಜಾಲಿಗಿಡಗಳು ದಟ್ಟವಾಗಿ ಬೆಳೆದಿದ್ದು ಅವುಗಳನ್ನು ಕಡೆದು ಹಾಕುತ್ತಿರುವಾಗ ಸದರಿ ವಿಚಾರಕ್ಕೆ ಈ ಕೇಸಿನ ಆರೋಪಿತರಾದ ನೀವು ಚಾಸಾ1 ರವರ ಜೊತೆ ಜಗಳ ತೆಗೆಯುವ ಉದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 143 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಎರಡನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ ಆರೋಪಿತರಾದ ನೀವು, ಜಗಳ ತೆಗೆಯುವ ಉದ್ದೇಶದಿಂದ ಅಕ್ರಮಕೂಟ ರಚಿಸಿಕೊಂಡು ಬಂದು ದೊಂಬಿ ಮಾಡಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 147 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಮೂರನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ ಆರೋಪಿತನಾದ ನೀನು ಚಾಸಾ1 ರವರ ತಲೆ ಕೂದಲನ್ನು ಹಿಡಿದು ಸೀರೆ ಸೆರಗನ್ನು ಹಿಡಿದು ಎಳೆದಾಡಿ ಮಾನಭಂಗ ಪಡಿಸಲು ಪ್ರಯತ್ನಿಸಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 354 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ನಾಲ್ಕನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ 1, 4 ಮತ್ತು 5 ನೇ ಆರೋಪಿತರಾದ ನೀವು ಚಾಸಾ1 ರವರಿಗೆ ಕೈಯಿಂದ ಕಪಾಳಕ್ಕೆ ಕಾಲಿನಿಂದ ಮನಬಂದಂತೆ ಹೊಡೆದು, 3 ನೇ ಆರೋಪಿತನು ಚಾಸಾ1 ರವರಿಗೆ ಕೈ ಮುಷ್ಠಿ ಮಾಡಿ ಎದೆಗೆ ಗುದ್ದಿ ಸ್ವರೂಪದ ಗಾಯಪಡಿಸಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 323 ಹಾಗೂ ಸ/ವಾ ಕಲಂ 149 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಐದನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ 2 ನೇ ಆರೋಪಿತನಾದ ಚಾಸಾ1 ರವರಿಗೆ ಬಡಿಗೆಯಿಂದ ಬೆನ್ನಿಗೆ ಬಲಸೊಂಟಕ್ಕೆ ಮತ್ತು ಬಲಗಾಲಿನ ಮೊಳಕಾಲು ಕೆಳೆಗೆ ಹೊಡೆದು ಸಾಮಾನ್ಯ ಸ್ವರೂಪದ ಗಾಯಪಡಿಸಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 324 ಹಾಗೂ ಸ/ವಾ ಕಲಂ 149 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಆರನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ ಆರೋಪಿತರಾದ ನೀವು ಚಾಸಾ1 ರವರಿಗೆ ಉದ್ರೇಖಿಸುವ ಉದ್ದೇಶದಿಂದ ಅವಾಚ್ಯ ಶಬ್ದಗಳಿಂದ ಬೈದಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 504 ಹಾಗೂ ಸ/ವಾ ಕಲಂ 149 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಕೊನೇಯದಾಗಿ ಮೇಲೆ ನಮೂದಿಸಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಈ ಕೇಸಿನ ಆರೋಪಿತರಾದ ನೀವು ಚಾಸಾ1 ರವರಿಗೆ ಜೀವದ ಬೇದರಿಕೆ ಹಾಕಿದ್ದು, ಆ ಮೇರೆಗೆ ಭಾ.ದಂ.ಸಂ.ಕಲಂ 506 ಹಾಗೂ ಸ/ವಾ ಕಲಂ 149 ರ ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಮಾಡಿದ್ದಿರಿ.

ಸದರಿ ಆರೋಪದ ಮೇಲೆ ನೀವು ಈ ನ್ಯಾಯಾಲಯದಿಂದ ಆರೋಪ ವಿಚಾರಣೆಗೆ ಗುರಿಯಗತಕ್ಕದ್ದೆಂದು ನಾನು ಈ ಮೂಲಕ ನಿರ್ದೇಶಿಸುತ್ತೇನೆ.

ಪ್ರ.ದಾ.ನ್ಯಾ.ದಂಡಾಧಿಕಾರಿಗಳು
ಸುರಪುರ

**ಆರೋಪಿತನ ಉತ್ತರ**

ಪ್ರಶ್ನೆ 1) ಈಗ ನಿಮಗೆ ಓದಿ ಹೇಳಿದ ದೋಷಾರೋಪಣೆಯ/ಆಪಾದನೆಯ ಸಾರಾಂಶ ತಿಳಿಯಿತೇ?

ಉತ್ತರಃ

ಪ್ರಶ್ನೆ 2) ಈ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಯಾಗಬೇಕೆಂದು ಬಯಸುವಿರಾ?

ಉತ್ತರಃ

(ಈ ಮೇಲಿನ ಆಪಾದನೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ ಆರೋಪಿ ನೀಡಿದ ಉತ್ತರವನ್ನು ಯಥಾವತ್ತಾಗಿ ದಾಖಲಿಸಿಕೊಂಡಿದೆ ಎಂದು ಪ್ರಮಾಣೀಕರಿಸುತ್ತೇನೆ)

**(ಬಸವರಾಜ)**
ಸಿ.ನ್ಯಾ. ಮತ್ತು ಪ್ರ.ದ.ನ್ಯಾ.ದಂ.ಗಳು.
ಸುರಪೂರ.

ಸ್ಥಳಃ ಸುರಪೂರ
ದಿನಾಂಕಃ 05.08.2025

ಆರೋಪಿತರ ಸಹಿ